# GOVERNMENT OF KARNATAKA

## ENERGY DEPARTMENT

**No: EN 162 PSR 2018** **Karnataka Government Secretariat,**
**Vikasa Soudha, Bangalore**
**Dated: 01.01.2019**

## NOTIFICATION FOR CALLING APPLICATIONS FOR APPOINTMENT OF MEMBER OF THE KARNATAKA ELECTRICITY REGULATORY COMMISSION

**1.** The Karnataka Electricity Regulatory Commission (KERC) is an independent Regulatory Body consisting of a Chairman and two Members. One post of Member, KERC will be vacant from 05.03.2019. The State Govt has constituted the Selection Committee as required under Section 85(1) of Electricity Act, 2003 for selection and recommending panel of names to the Govt for appointment of Member, KERC.

**2.** Applications are invited from suitable persons for selection and appointment of Member of the Karnataka Electricity Regulatory Commission.

**3. Qualification and Experience required for applying to the post of Member, KERC:**

a) The applicant applying for the post of Member of the KERC shall be a person of ability, integrity and standing who have adequate knowledge of and have shown capacity in, dealing with problems relating to Engineering, Finance, Commerce, Economics, Law or Management.

b) The applicant must be a citizen of India and should have the working knowledge of Kannada.

c) The applicant should have a minimum 25 years of experience and should have worked in a senior position in the said field.

**4.** The person appointed for the post of Member shall hold office for a period of 5 years from the date of his/her appointment as Member or until he/she attains the age of 65 years, whichever is earlier.

The person appointed as Member is not eligible for reappointment for the same post in the Commission at any time after the expiry of his/her term of appointment.

**5.** A person having any financial or other interest which is likely to affect prejudicially his/her functioning as Member of the Commission, is not eligible.

**6.** **REMUNERATION:** As per KERC (Chairman and Other Member's Remuneration / Allowance and Conditions of Service), Rules 2000 and as amended from time to time.

**7.** **LAST DATE FOR SUBMISSION OF APPLICATION:** The applicants should file their application along with the copies of the testimonials and declarations by Registered Post/Courier / in person addressed to the Additional Chief Secretary to Government, Energy Department, Room No. 236, 2nd floor Vikasa Soudha, Dr. B. R. Ambedkar Veedhi, Bangalore 560 001 on or before 31.01.2019 by 5.30 PM.

**8.** Application should be in the prescribed Form-1 (Annexed) duly singed by the applicant

**9.** The applicant shall furnish a declaration to the effect that he/she does not have any business or any financial interest in any office, employment or consultancy agreement or arrangement in his/her own name or in the names of any relative, in any firm, association of persons or body corporate on such aspects/issues.

**10.** The Applicant shall furnish a declaration to the effect that he/she does not have any financial or other interest which is likely to affect prejudicially his functioning as such Member, KERC.

**11.** The applicant shall furnish a declaration that he/she shall not hold any other office during the tenure in KERC, if selected and appointed as Member in KERC.

**12.** The Applicant shall furnish a letter of willingness to resign or take voluntary retirement from the present post and to join KERC if selected and appointed as Member in KERC.

**13.** The decision of the Selection Committee is final with regard to selection of candidates for appointment for the post of Member in KERC.

**(P. RAVIKUMAR)**
**Additional Chief Secretary to Government,**
**Energy Department and**
**Convenor, Selection Committee**
**Phone 080 -22252373,**
**E-mail: prs-energy@karnataka.gov.in**

Annexure

**Form-1**

| | | | |
|---|---|---|---|
| 1. | Name and address of the Applicant | : | |
| 2. | Age and date of birth | : | |
| 3. | Present Position | : | |
| 4. | Educational Qualification | : | |
| 5. | Details of Posts Previously held | : | |
| 6. | Proof of Experience in the above fields | : | |
| 7. | Name of the post applied for | : | |

**Note:** Documents required for substantiating the Qualifications, experience and other information as required in the notification should be enclosed

**Date:** **Signature**

**Place:**

## Declarations

**1. Declaration:**

I hereby declare that I, in my own name or in the names of any of my relatives, do not have any office, employment or consultancy agreement or arrangement in any firm, association of persons or body corporate carrying on any of the following business or any financial interest therein.

i) Generation, Transmission, Distribution or Supply of Electricity:
ii) Manufacture, sale or supply of any fuel for generation of electricity:
iii) Manufacture, sale, lease, hire, supply or otherwise dealing in machinery, plant, equipment, apparatus or fitting for the generation, transmission, distribution, supply or use of electricity, and
iv) Any entity providing professional services to any of the business referred to in (i), (ii) and (iii) above.

**Signature**

**2. Declaration:**

I hereby declare that I will not have any financial or other interests which is likely to affect prejudicially my functioning as Member, KERC, if appointed.

**Signature**

**3. Declaration:**

I hereby declare that I will not hold any other office during the tenure of Member, KERC, if appointed.

**Signature**

**4. Declaration:**

I hereby declare that I will resign or take voluntary retirement from the present post, if I am appointed as Member in KERC.

**Signature**

**ಕರ್ನಾಟಕ ಸರ್ಕಾರ**

**ಇಂಧನ ಇಲಾಖೆ**

**ಸಂಖ್ಯೆ: ಇಎನ್ 162 ಪಿಎಸ್‌ಆರ್ 2018** **ಕರ್ನಾಟಕ ಸರ್ಕಾರದ ಸಚಿವಾಲಯ,**
**ವಿಕಾಸ ಸೌಧ, ಬೆಂಗಳೂರು**
**ದಿನಾಂಕ: 01.01.2019**

**ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಸದಸ್ಯರ ಹುದ್ದೆಗೆ ನೇಮಕಾತಿ ಮಾಡಲು ಅರ್ಜಿ ಆಹ್ವಾನಿಸುವ ಪ್ರಕಟಣೆ**

**1.** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು (KERC) ಒಂದು ಸ್ವತಂತ್ರ ನಿಯಂತ್ರಣ ಸಂಸ್ಥೆಯಾಗಿದ್ದು, ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನೊಳಗೊಂಡಿರುತ್ತದೆ. ಒಬ್ಬ ಸದಸ್ಯರ ಹುದ್ದೆಯು ದಿನಾಂಕ: 05.03.2019ರಿಂದ ತೆರವಾಗುವುದರಿಂದ, ತೆರವಾಗಲಿರುವ ಸದಸ್ಯರ ಹುದ್ದೆಗೆ ಅಭ್ಯರ್ಥಿಯನ್ನು ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ವಿದ್ಯುಚ್ಛಕ್ತಿ ಕಾಯ್ದೆ, 2003 ಸೆಕ್ಷನ್ 85 (1)ರನ್ವಯ ಆಯ್ಕೆ ಸಮಿತಿಯನ್ನು ರಚನೆ ಮಾಡಲಾಗಿದೆ.

**2.** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಒಬ್ಬ ಸದಸ್ಯರ ಹುದ್ದೆಗೆ ಆಯ್ಕೆ ಮತ್ತು ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**3.** **ಆಯೋಗದ ಸದಸ್ಯರ ಹುದ್ದೆಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಜಿದಾರರ ವಿದ್ಯಾರ್ಹತೆ ಮತ್ತು ಅನುಭವ:**

ಅ) ಆಯೋಗದ ಸದಸ್ಯರ ಹುದ್ದೆಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಜಿದಾರರುಗಳು ಇಂಜಿನಿಯರಿಂಗ್, ಆರ್ಥಿಕ, ಅರ್ಥಶಾಸ್ತ್ರ, ವಾಣಿಜ್ಯ ಶಾಸ್ತ್ರ, ಕಾನೂನು ಅಥವಾ ಆಡಳಿತ ವಿಷಯಗಳಲ್ಲಿ ಪರಿಪೂರ್ಣ ಜ್ಞಾನ, ನಿಷ್ಠೆ ಮತ್ತು ಅನುಭವವುಳ್ಳವರಾಗಿರುವುದಲ್ಲದೆ ಈ ವಿಷಯಗಳನ್ನು ವ್ಯವಹರಿಸುವಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದವರಾಗಿರಬೇಕು.

ಆ) ಭಾರತದ ಪ್ರಜೆಯಾಗಿರಬೇಕು ಮತ್ತು ಕನ್ನಡ ವ್ಯವಹಾರ ಜ್ಞಾನವುಳ್ಳವರಾಗಿರಬೇಕು.

ಇ) ಅಭ್ಯರ್ಥಿಯು ಕನಿಷ್ಟ 25 ವರ್ಷಗಳ ಅನುಭವವುಳ್ಳವರಾಗಿರತಕ್ಕದ್ದು ಹಾಗೂ ಈ ಕ್ಷೇತ್ರದಲ್ಲಿ ಹಿರಿಯ ಹುದ್ದೆಯಲ್ಲಿ ಸೇವೆ ಸಲ್ಲಿಸಿರಬೇಕು.

**4.** ಸದಸ್ಯರು ಆಗಿ ನೇಮಕಾತಿಯಾದ ದಿನಾಂಕದಿಂದ ಐದು (5) ವರ್ಷಗಳ ಅವಧಿಗೆ ಅಥವಾ ಅವರ ವಯಸ್ಸು 65 ವರ್ಷ ಪೂರ್ಣಗೊಳ್ಳುವವರೆಗೆ, ಇವುಗಳಲ್ಲಿ ಯಾವುದು ಮೊದಲೊ ಆ ಅವಧಿಯವರೆಗೆ ಸದಸ್ಯರು ಅಧಿಕಾರವನ್ನು ಹೊಂದಿರುತ್ತಾರೆ.

ಸದಸ್ಯರುರವರ ಅಧಿಕಾರದ ಅವಧಿ ಪೂರ್ಣಗೊಂಡ ನಂತರ ಅವರು ಆಯೋಗದಲ್ಲಿ ಅದೇ ಹುದ್ದೆಗೆ ಮರು ನೇಮಕಾತಿಗೆ ಅರ್ಹರಾಗಿರುವುದಿಲ್ಲ.

5. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಕರ್ತವ್ಯ ನಿರ್ವಹಣೆಗೆ ಅಡಚಣೆ ಉಂಟಾಗುವಂತಹ ಯಾವುದೇ ಆರ್ಥಿಕ ಅಥವಾ ಇನ್ನಿತರೆ ಹಿತಾಸಕ್ತಿ ಹೊಂದಿದಲ್ಲಿ ಅಂತಹ ಅಭ್ಯರ್ಥಿಯು ಅರ್ಹರಾಗಿರುವುದಿಲ್ಲ.

6. **ಸಂಭಾವನೆ:** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರು ಮತ್ತು ಇತರ ಸದಸ್ಯರುಗಳ ಸಂಭಾವನೆ/ಭತ್ಯೆ ಮತ್ತು ಸೇವಾ ನಿಯಮಗಳು), ನಿಯಮಗಳು 2000ರಲ್ಲಿ ಹಾಗೂ ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳ ಪ್ರಕಾರ ಇರುತ್ತದೆ.

7. **ಅರ್ಜಿಯನ್ನು ಸಲ್ಲಿಸಲು ಕಡೆಯ ದಿನಾಂಕ:** ಅರ್ಜಿದಾರರು ಅರ್ಜಿಗಳನ್ನು ಪ್ರಮಾಣ ಪತ್ರ ಮತ್ತು ಘೋಷಣಾ ಪತ್ರಗಳೊಂದಿಗೆ ನೊಂದಾಯಿತ ಅಂಚೆ/ಕೊರಿಯರ್ ಮೂಲಕ ಅಥವಾ ಖುದ್ದಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕೊಠಡಿ ಸಂಖ್ಯೆ: 236, 2ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು 560 001 ಇವರಿಗೆ ದಿನಾಂಕ: 31.01.2019ರ ಸಂಜೆ 5.30ರೊಳಗಾಗಿ ಅಥವಾ ಮುಂಚಿತವಾಗಿ ಕಛೇರಿ ಕೆಲಸದ ಸಮಯದಲ್ಲಿ ಸಲ್ಲಿಸುವುದು.

8. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರುರವರ ಹುದ್ದೆಗೆ ಅರ್ಜಿ ಸಲ್ಲಿಸುವ ಅರ್ಜಿದಾರರು ಸಹಿಯೊಂದಿಗೆ ನಿಗಧಿತ ನಮೂನೆ-1 (ಅನುಬಂಧ) ರಲ್ಲಿ ಸಲ್ಲಿಸಬೇಕು:

9. ಅಭ್ಯರ್ಥಿಯು ತನಗೆ ಯಾವುದೇ ನೇಮಕಾತಿ ಅಥವಾ ಉದ್ಯೋಗದಲ್ಲಿ ಅಥವಾ ಸಮಾಲೋಚನೆ ಒಪ್ಪಂದ, ವ್ಯವಸ್ಥೆಯಲ್ಲಿ ವಾಣಿಜ್ಯ ಅಥವಾ ಆರ್ಥಿಕ ಹಿತಾಸಕ್ತಿ/ಸಂಬಂಧ ತನ್ನ ಹೆಸರಿನಲ್ಲಾಗಲಿ ಅಥವಾ ಸಂಬಂಧಿಕರ ಹೆಸರಿನಲ್ಲಾಗಲಿ ಹೊಂದಿರುವುದಿಲ್ಲವೆಂದು ಘೋಷಣಾ ಪತ್ರ ನೀಡುವುದು.

10. ಅರ್ಜಿದಾರರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಕರ್ತವ್ಯಕ್ಕೆ ಅಡಚಣೆ ಉಂಟಾಗುವಂತಹ ಯಾವುದೇ ಆರ್ಥಿಕ ಅಥವಾ ಇನ್ನಿತರೆ ಹಿತಾಸಕ್ತಿ ಹೊಂದಿಲ್ಲದಿರುವ ಬಗ್ಗೆ ಘೋಷಣಾ ಪತ್ರ ನೀಡುವುದು.

11. ಅರ್ಜಿದಾರರು ಒಂದು ವೇಳೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ಆಯ್ಕೆಗೊಂಡು ನೇಮಕ ಹೊಂದಿದಲ್ಲಿ ಸದಸ್ಯರ ಅಧಿಕಾರದ ಅವಧಿಯಲ್ಲಿ ಯಾವುದೇ ಇತರೆ ಅಧಿಕಾರವನ್ನು ಹೊಂದುವುದಿಲ್ಲವೆಂದು ಘೋಷಣಾ ಪತ್ರ ನೀಡುವುದು.

12. ಒಂದು ವೇಳೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ಆಯ್ಕೆಗೊಂಡು ನೇಮಕವಾದರೆ, ಪ್ರಸ್ತುತ ಹೊಂದಿರುವ ಹುದ್ದೆ, ಸ್ಥಾನಕ್ಕೆ ರಾಜೀನಾಮೆ ನೀಡಲು ಅಥವಾ ಸ್ವಯಂ ನಿವೃತ್ತಿ ಪಡೆಯಲು ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸೇವೆಗೆ ಸೇರಲು ಇಚ್ಛಾ ಪತ್ರ ನೀಡುವುದು.

13. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ಅಭ್ಯರ್ಥಿಯ ಹೆಸರನ್ನು ಆಯ್ಕೆ ಮಾಡುವಲ್ಲಿ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

**(ಪಿ. ರವಿಕುಮಾರ್)**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,**
**ಇಂಧನ ಇಲಾಖೆ ಮತ್ತು**
**ಸಂಚಾಲಕರು, ಆಯ್ಕೆ ಸಮಿತಿ**
**ದೂರವಾಣಿ: 080 – 22252373**
E-mail: prs-energy@karnataka.gov.in

ಅನುಬಂಧ

**ನಮೂನೆ-1**

1. ಅರ್ಜಿದಾರರ ಹೆಸರು ಮತ್ತು ವಿಳಾಸ :
2. ವಯಸ್ಸು ಮತ್ತು ಜನ್ಮ ದಿನಾಂಕ: :
3. ಈಗ ಹೊಂದಿರುವ ಸ್ಥಾನ :
4. ವಿದ್ಯಾರ್ಹತೆ :
5. ಈ ಹಿಂದೆ ಹೊಂದಿದ ಹುದ್ದೆಗಳ ವಿವರ :
6. ಮೇಲಿನ ಹುದ್ದೆಗಳಲ್ಲಿನ ಅನುಭವದ ದಾಖಲಾತಿ :
7. ಅರ್ಜಿ ಸಲ್ಲಿಸುತ್ತಿರುವ ಹುದ್ದೆಯ ಹೆಸರು :

**ಟಿಪ್ಪಣಿ:** ವಿದ್ಯಾರ್ಹತೆ ಮತ್ತು ಅನುಭವಗಳ ಮತ್ತು ಅಧಿಸೂಚನೆಯಲ್ಲಿ ಕೋರಿರುವ ಇತರೆ ಮಾಹಿತಿಗಳ ಬಗ್ಗೆ ಅಗತ್ಯ ದಾಖಲಾತಿಗಳನ್ನು ಒದಗಿಸುವುದು.

**ದಿನಾಂಕ:**

**ಸ್ಥಳ:** **ಸಹಿ**

# ಘೋಷಣೆಗಳು

1. **ಘೋಷಣಾ ಪತ್ರ**

ನಾನು ಈ ಮೂಲಕ ಘೋಷಿಸುವುದೇನೆಂದರೆ, ನನ್ನ ಹೆಸರಿನಲ್ಲಾಗಲಿ ಅಥವಾ ನನ್ನ ಸಂಬಂಧಿಕರ ಹೆಸರಿನಲ್ಲಾಗಲಿ ಈ ಕೆಳಕಂಡ ಯಾವುದೇ ವ್ಯವಹಾರಗಳಲ್ಲಿ ತೊಡಗಿರುವ ಸಂಸ್ಥೆಗಳು/ಕಂಪನಿಗಳಲ್ಲಿ ವಾಣಿಜ್ಯ ಅಥವಾ ಆರ್ಥಿಕ ಹಿತಾಸಕ್ತಿ ಅಥವಾ ಸಮಾಲೋಚನೆ ಒಪ್ಪಂದ ಹೊಂದಿರುವುದಿಲ್ಲ.

i. ವಿದ್ಯುಚ್ಛಕ್ತಿ ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಅಥವಾ ಪೂರೈಕೆ.

ii. ವಿದ್ಯುತ್ ಉತ್ಪಾದನೆಗೆ ಬಳಸಲಾದ ಯಾವುದೇ ಇಂಧನದ ತಯಾರಿಕೆ, ಮಾರಾಟ ಅಥವಾ ಪೂರೈಕೆ.

iii. ವಿದ್ಯುಚ್ಛಕ್ತಿಯ ಉತ್ಪಾದನೆ, ಪ್ರಸರಣ, ವಿತರಣ, ಪೂರೈಕೆ ಅಥವಾ ವಿದ್ಯುತ್ ಬಳಕೆಯ ಸಂಬಂಧದ ಯಂತ್ರಗಳ, ಸ್ಥಾವರಗಳ, ಉಪಕರಣಗಳ, ಸಂಬಂಧಿತ ಭಾಗದ ತಯಾರಿಕೆ, ಮಾರಾಟ, ಗುತ್ತಿಗೆ, ಬಾಡಿಗೆ, ಪೂರೈಕೆ ಅಥವಾ ಬೇರಾವುದೇ ರೀತಿಯ ವ್ಯವಹಾರ ಮತ್ತು

iv. ಮೇಲೆ (i), (ii) ಮತ್ತು (iii)ರ ವಿಷಯಗಳಿಗೆ ಸಂಬಂಧಿಸಿದಂತೆ, ವೃತ್ತಿಪರ ಸೇವೆ ಒದಗಿಸುವ ಯಾವುದಾದರು ಸಂಸ್ಥೆ.

**ಸಹಿ**

2. **ಘೋಷಣಾ ಪತ್ರ**

ನಾನು ಈ ಮೂಲಕ ಘೋಷಿಸುವುದೇನೆಂದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ಆಯ್ಕೆಯಾದಲ್ಲಿ, ಆ ಹುದ್ದೆಯ ಕರ್ತವ್ಯಕ್ಕೆ ಅಡಚಣೆ ಉಂಟಾಗುವಂತಹ ಯಾವುದೇ ಆರ್ಥಿಕ ಅಥವಾ ಇನ್ನಿತರೆ ಹಿತಾಸಕ್ತಿ ಹೊಂದಿರುವುದಿಲ್ಲ.

**ಸಹಿ**

3. **ಘೋಷಣಾ ಪತ್ರ**

ನಾನು ಈ ಮೂಲಕ ಘೋಷಿಸುವುದೇನೆಂದರೆ, ಒಂದು ವೇಳೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ನೇಮಕ ಹೊಂದಿದಲ್ಲಿ, ಸದಸ್ಯರ ಅಧಿಕಾರವಧಿಯಲ್ಲಿ ಯಾವುದೇ ಇತರೆ ಅಧಿಕಾರವನ್ನು ಹೊಂದುವುದಿಲ್ಲ.

**ಸಹಿ**

4. **ಘೋಷಣಾ ಪತ್ರ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸದಸ್ಯರ ಹುದ್ದೆಗೆ ನೇಮಕಾತಿಯಾದಲ್ಲಿ, ಹಾಲಿ ಇರುವ ಹುದ್ದೆಗೆ ರಾಜೀನಾಮೆ ನೀಡುತ್ತೇನೆ ಅಥವಾ ಸ್ವಯಂ ನಿವೃತ್ತಿ ಪಡೆಯುತ್ತೇನೆ.

**ಸಹಿ**